



ಆರ್ಥಿಕ ತುಮುಲಗಳನ್ನು ಅನುಭವಿಸಿತು; ಕೈಗಾರಿಕಾ ಕ್ರಾಂತಿಯ ನೋವುಗಳನ್ನುಂಡು ತದನಂತರ ತನ್ನ ಶ್ರೀಮಂತಿಕೆಯ ಸಮಾಜ ವ್ಯವಸ್ಥೆಯನ್ನು ರೂಪಿಸಿಕೊಂಡು ಬರುವುದಕ್ಕಾಗಿ ಸಾಮ್ರಾಜ್ಯಶಾಹಿ ಮನೋಭಾವವನ್ನು ಬೆಳೆಸಿಕೊಂಡಿತು. ಆ ಮೂಲಕ ಜಗತ್ತಿನ ದೇಶಗಳಿಗೆಲ್ಲ 'ದೊಡ್ಡಣ್ಣ'ನಾಗುವ ಮನೋಭಾವವನ್ನು ಬೆಳೆಸಿಕೊಂಡು ಬರುತ್ತಿರುವುದೂ ಮತ್ತು ಜಗತ್ತಿನ ಸಂಪನ್ಮೂಲಗಳ ಮುಕ್ಕಾಲು ಭಾಗವನ್ನು ತನ್ನ ಕಾಲುಭಾಗದ ಹಿತಕ್ಕಾಗಿ ಬಳಸಿಕೊಳ್ಳುತ್ತಿರುವುದೂ ಎಲ್ಲರಿಗೂ ತಿಳಿದೇ ಇದೆ. ಇಷ್ಟೇ ಅಲ್ಲ, ತನ್ನ ಅದ್ವಿತೀಯ ಶ್ರೀಮಂತಿಕೆಯನ್ನು ಉಳಿಸಿಕೊಳ್ಳಲು ಮೂರನೇ ಮಹಾಯುದ್ಧಕ್ಕೂ ಅದು ಸಿದ್ಧ ಎಂಬುದೂ ಗುಪ್ತ ವಿಷಯವೇನೂ ಅಲ್ಲ.

ಮುನ್ನೂರು ವರ್ಷಗಳ ಹಿಂದೆಯಷ್ಟೆ ಕಡು ಬಡತನದಲ್ಲಿದ್ದ ಅಮೆರಿಕಾ, ಬಡತನವೊಂದು ಶಾಪವೆಂದು ಭಾವಿಸಿ, ತ್ವರಿತಗತಿಯಲ್ಲಿ ಶ್ರೀಮಂತ ರಾಷ್ಟ್ರವಾದುದನ್ನು ನೋಡಿ, ಭಾರತ ಕೀಳರಿಮೆ ಬೆಳೆಸಿಕೊಂಡಿದೆ. ಹೇಗಾದರೂ ಮಾಡಿ, ತಾನೂ ಬಡತನವೆಂಬ ಶಾಪದಿಂದ ವಿಮೋಚನೆಗೊಳ್ಳುವುದಕ್ಕೆ ಅದು ಕಂಕಣಬದ್ಧವಾಗಿದೆ. ನೂರು ವರ್ಷಗಳ ಹಿಂದೆ ಗಾಂಧೀಜಿಯವರು ತಮ್ಮ 'ಹಿಂದ್–ಸ್ವರಾಜ್' ಪುಸ್ತಕದಲ್ಲಿ, ಭಾರತವೇನಾದರೂ ತನ್ನ ಬಡತನ ನಿರ್ಮೂಲನೆಗಾಗಿಯೊ, ಅಭಿವೃದ್ಧಿಗಾಗಿಯೊ ಪಾಶ್ಚಿಮಾತ್ಯ ರಾಷ್ಟ್ರಗಳ ಅನುಕರಣೆ ಮಾಡಹೊರಟರೆ, ಅದು ಕೂಡ ತಾನು ಸಂಪಾದಿಸಿದ ಶ್ರೀಮಂತಿಕೆಯನ್ನು ಉಳಿಸಿಕೊಂಡು, ಬೆಳೆಸಿಕೊಂಡು ಬರಲು ಜಗತ್ತಿನ ಇತರ ದೇಶಗಳನ್ನು ತನ್ನ ವಸಾಹತುಗಳನ್ನಾಗಿ ಮಾಡಿಕೊಳ್ಳಬೇಕಾಗುತ್ತದೆಂದು ಹೇಳಿದ್ದರು. ಅವರು ಹೇಳಿದ್ದಂತೆಯೆ ಈಗ ಭಾರತ ತನಗಿಂತ ಹಿಂದಿರುವ ಆಫ್ರಿಕಾ ದೇಶಗಳಲ್ಲಿ, ನೇಪಾಳ ಮತ್ತು ಭೂತಾನದಂತಹ ದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಮುಂದಾಗಿದೆ. ಈ ಯೋಜನೆಯ ಹಿಂದಿರುವ ಸ್ವಾರ್ಥ ಮತ್ತು ವಿಚಾರ, ಅಮೆರಿಕಾ, ಚೀನಾ, ರಶಿಯಾದಂಥ ಸಾಮ್ರಾಜ್ಯಶಾಹಿ ಮನೋಭಾವದ ರಾಷ್ಟ್ರಗಳ ಜಾಗತೀಕರಣದ ಹಿಂದಿರುವ ವಿಚಾರ ಮತ್ತು ಸ್ವಾರ್ಥಕ್ಕಿಂತ ಭಿನ್ನವಾಗಿಲ್ಲ. ಆದ್ದರಿಂದ ಗಾಂಧೀಜಿಯವರು ಬಡತನ ನಿರ್ಮೂಲನದ ಬಗ್ಗೆ ಆಲೋಚಿಸುವ ಬಗೆಯೇ ಬೇರೆಯಾಗಿದೆ. ಈ ವಿಷಯದಲ್ಲಿ ಅವರ ಚಿಂತನೆ ಸರ್ಕಾರದ ಪ್ರಚಲಿತ ಆರ್ಥಿಕ ಚಿಂತನೆಗೆ ತೀರ ವಿರುದ್ಧವಾಗಿದೆ. ಗಾಂಧೀಜಿಯವರದು ಶಾಶ್ವತ ಅರ್ಥಶಾಸ್ತ್ರದ ಚಿಂತನೆಯಾಗಿದ್ದರೆ, ಇಂದಿನ ಅರ್ಥಶಾಸ್ತ್ರಜ್ಞರ ಆರ್ಥಿಕ ಚಿಂತನೆ ತಾತ್ಕಾಲಿಕ ಸ್ವರೂಪದ್ದಾಗಿದೆ.

ಬಡತನ ನಿರ್ಮೂಲನದ ಬಗ್ಗೆ ಸರ್ಕಾರದ ಇಂದಿನ ಉಪಾಯಗಳಲ್ಲಿ ಮೊದಲನೆಯದು ಗ್ರಾಮಗಳ ವಿಸರ್ಜೀಕರಣ! ಆದರೆ ಗಾಂಧೀಜಿಯವರ ಪ್ರಕಾರ ಗ್ರಾಮಗಳ ಸಮಗ್ರ ಏಳಿಗೆಯೇ ಬಡತನ ನಿರ್ಮೂಲನಕ್ಕೆ ನಾಂದಿ. ಬಡತನದ ನಿರ್ಮೂಲನಕ್ಕಾಗಿಯೇ ಗ್ರಾಮಗಳ ಕೃಷಿಭೂಮಿಯ ಮೇಲೆ ಕೈಗಾರಿಕೆಗಳ ಕಟ್ಟಡಗಳು, ವಿಮಾನನಿಲ್ದಾಣಗಳು ಬರಬೇಕೆಂಬ ನೀತಿ ಸರ್ಕಾರದ್ದಾಗಿದೆ. ಆದರೆ ಗ್ರಾಮಗಳಲ್ಲಿ ಸ್ವರಾಜ್ಯದ ಸ್ಥಾಪನೆಯಾಗಬೇಕು; ಕೃಷಿ ಮತ್ತು ಗ್ರಾಮೋದ್ಯೋಗಗಳ ಮೂಲಕ ಗ್ರಾಮಗಳ ಸಮೃದ್ಧಿಯನ್ನು ಕಾಣಬೇಕೆಂಬುದು ಗಾಂಧೀಜಿ ಅವರ ಅಭಿಪ್ರಾಯವಾಗಿತ್ತು.

ಬಡತನ ನಿರ್ಮೂಲನದತ್ತ ಮೊದಲ ಹೆಜ್ಜೆ, ಸರಳ ಜೀವನ ಎಂದು ಗಾಂಧೀಜಿ ಹೇಳಿದ್ದರು. ಅದಕ್ಕಾಗಿ ಅವರು **ಅಸಂಗ್ರಹ, ಅಪರಿಗ್ರಹ** ಮತ್ತು **ಅಸ್ತೇಯ** ಎಂಬ ವ್ರತಗಳನ್ನು ಸೂಚಿಸಿದ್ದರು.

ಇಂದು ದೇಶದಲ್ಲಿ ಬಡತನವಿದೆ ಎಂದು ಹೇಳುವುದಾದರೆ ಅದಕ್ಕೆ, ಭಾರತೀಯರು ಪಾಶ್ಚಿಮಾತ್ಯ ಮಾದರಿಯ ಅಭಿವೃದ್ಧಿ ನೀತಿಯನ್ನೂ, ಸಂಸ್ಕೃತಿಯನ್ನೂ ಅನುಸರಿಸುತ್ತಿರುವುದೇ ಮುಖ್ಯ ಕಾರಣ. ಆದ್ದರಿಂದ ಒಂದು ಕಡೆಗೆ ತಿಂಗಳೊಂದಕ್ಕೆ ಲಕ್ಷಾವಧಿ ರೂಪಾಯಿ ಸಂಪಾದಿಸುವ ಉದ್ಯೋಗಿಗಳು ಹಾಗೂ ಗಗನಚುಂಬಿ ಕಟ್ಟಡಗಳಲ್ಲಿ ಈಜುಕೊಳ, ಹೆಲಿಪ್ಯಾಡ್ ಮುಂತಾದ ಐಶಾರಾಮಿ ಸೌಕರ್ಯಗಳುಳ್ಳ ಮನೆಗಳಲ್ಲಿ ವಾಸಿಸುವ ಲಕ್ಷ್ಮೀಪುತ್ರರಿದ್ದರೆ, ಇನ್ನೊಂದು ಕಡೆ ಅತಿಸಾಮಾನ್ಯ ಗುಡಿಸಲುಗಳು ಹಾಗೂ ಹೆಂಚಿನ ಮನೆಗಳಲ್ಲಿ ಐದಾರು ಜನ ವಾಸಿಸುವ ಸುದಾಮನ ಮಕ್ಕಳಿದ್ದಾರೆ. ವೃದ್ಧಾಪ್ಯದ ಕಾರಣಕ್ಕಾಗಿ ತಿಂಗಳೊಂದಕ್ಕೆ ಹತ್ತು ಸಾವಿರ ರೂಪಾಯಿಗಳಷ್ಟು ತೆತ್ತು ವೃದ್ಧಾಶ್ರಮದಲ್ಲಿರುವ ಜನರಿದ್ದರೆ, ಇನ್ನೊಂದು ಕಡೆ ಸರ್ಕಾರ ಕೊಡಮಾಡುವ ಇನ್ನೂರು ರೂಪಾಯಿಗಳ ಅನಿಯಮಿತ ವೃದ್ಧಾಪ್ಯ ವೇತನಕ್ಕಾಗಿ ಚಾತಕಪಕ್ಷಿಯಂತೆ ಕಾದು ಕುಳಿತಿರುವ ಕೋಟಿ ಕೋಟಿ ಸಂಖ್ಯೆಯ ನಿಃಸಹಾಯಕ ವೃದ್ಧರಿದ್ದಾರೆ. ಒಂದು ಕಡೆ ಎಲ್ಲ ರೀತಿಯಲ್ಲೂ ಜೀವನ ಸುರಕ್ಷತೆಯನ್ನು ಹೊಂದಿರುವ ಸರ್ಕಾರಿ ನೌಕರರಿದ್ದರೆ, ಇನ್ನೊಂದು ಕಡೆ ಜೀವನ ಸುರಕ್ಷತೆಯ ಎಲ್ಲ ಭಾರವನ್ನೂ ಭಗವಂತನ ಮೇಲೆ ಹಾಕಿ ರಸ್ತೆಗಳಲ್ಲಿ, ಜೋಪಡಿಗಳಲ್ಲಿ, ರೈಲ್ವೇ ನಿಲ್ದಾಣಗಳಲ್ಲಿ ಮಲಗುವ ಕೋಟ್ಯಂತರ ಜನರಿದ್ದಾರೆ. ಇದೆಲ್ಲ ಪಾಶ್ಚಿಮಾತ್ಯ ರೀತಿಯ ಅಭಿವೃದ್ಧಿಯ ಫಲವಾಗಿ ಎಂದು ಬೇರೆ ಹೇಳಬೇಕಾಗಿಲ್ಲ.

ಅಲ್ಲದೆ ಬಡತನದ ಕಾರಣದಿಂದಾಗಿ, ಸಾಲಗಳ ಕಾರಣದಿಂದಾಗಿ ಆತ್ಮಹತ್ಯೆಗಳೂ ಅವಿರತವಾಗಿ ನಡೆಯುತ್ತಿವೆ. ಅಂದರೆ ಬಡತನದ ನಿರ್ಮೂಲನದ ಪ್ರಯತ್ನ ಎಲ್ಲೋ ದಾರಿತಪ್ಪಿದೆ.

ಇದಕ್ಕೆ ಕಾರಣವನ್ನು ಹುಡುಕುವುದು ಅವಶ್ಯವಾಗಿದೆ. ಇಲ್ಲಿ ನಮಗೆ ಗಾಂಧೀಜಿ ತುಂಬ ಪ್ರಸ್ತುತವಾಗುತ್ತಾರೆ. ಅವರು ಹೇಳಿದ ಒಂದು ಮಾತನ್ನು ಇಲ್ಲಿ ಗಮನಿಸಬಹುದು: **"ಬೃಹತ್ ಪ್ರಮಾಣದ ಉತ್ಪಾದನೆಗಿಂತ ಬೃಹತ್ ಸಂಖ್ಯೆಯ ಜನರಿಂದ ಆಗುವ ಉತ್ಪಾದನೆ ಮುಖ್ಯ."** ಅಂದರೆ ದೇಶದ ಪ್ರತಿಯೊಬ್ಬರ ಕೈಗೂ ಆರ್ಥಿಕ ಉತ್ಪಾದನೆಯ ಸಾಧನ ಸಿಗಬೇಕು; ಪ್ರತಿಯೊಂದು ಮನೆಯೂ ಕಮ್ಮಟವಾಗಬೇಕು. ಈ ರೀತಿ ದೇಶದ ಎಲ್ಲ ಸ್ಥಳಗಳಲ್ಲಿ, ಎಲ್ಲ ವ್ಯಕ್ತಿಗಳಿಗೆ ಉದ್ಯೋಗಾವಕಾಶ ದೊರೆತಲ್ಲಿ ಮಾತ್ರವೇ ಬಡತನ ನಿರ್ಮೂಲನ ಸಾಧ್ಯವೇ ಹೊರತು ಕೆಲವೇ ಸ್ಥಳಗಳಲ್ಲಿ, ಕೆಲವೇ ವ್ಯಕ್ತಿಗಳಿಗೆ ಉದ್ಯೋಗಾವಕಾಶ ದೊರೆಯುವುದರಿಂದ ಬಡತನ ನಿರ್ಮೂಲನ ಸಾಧ್ಯವಿಲ್ಲ.

ಬಡತನ ನಿರ್ಮೂಲನಕ್ಕೆ ಗಾಂಧೀಜಿಯವರ ಸಲಹೆಯೇ ಸಿದ್ಧೌಷಧಿಯಾಗಿರುವಾಗ, ನಮ್ಮ ದೇಶದ ಸರ್ಕಾರಗಳು ಈ ಉಪಾಯವನ್ನು ಮರೆತಿರುವುದು ಬಡತನದ ಹೆಚ್ಚಳಕ್ಕೂ, ನಿರುದ್ಯೋಗದ ಏರಿಕೆಗೂ, ಹಳ್ಳಿಗಳ ಬರಡಾಗುವಿಕೆಗೂ, ನಗರಗಳ ಕೊಬ್ಬುವಿಕೆಗೂ ಕಾರಣವಾಗಿದೆ. ತಪ್ಪು ಅಭಿವೃದ್ಧಿಯ ಮಧ್ಯದಲ್ಲೂ, ಎರಡಂಕಿಯ ಜಿ.ಡಿ.ಪಿ.ಯ ಪ್ರಗತಿಯ ಮಧ್ಯದಲ್ಲೂ ಜನಸಾಮಾನ್ಯರಲ್ಲಿ ಏನೋ ಅಸಮಾಧಾನ, ಅಸಂತೋಷ ತಾಂಡವವಾಡುತ್ತಿದೆ. ಈ ಅಂಶ ಇಂದಿನ ಸಮಾಜಜೀವನದಲ್ಲಿ ನಿಚ್ಚಳವಾಗಿ ಕಾಣುತ್ತಿದೆ. ಹಾಗೆಂದೇ ಅನೈತಿಕತೆ, ಕೊಲೆ–ಸುಲಿಗೆಗಳು, ಹಿಂಸೆ ಮತ್ತು ಭ್ರಷ್ಟಾಚಾರ ಹೆಚ್ಚಾಗಿವೆ. ವಿಶ್ವಸಂಸ್ಥೆಯ ವರದಿ ಪ್ರಕಾರ ೨೦೦೭–೦೮ನೇ ಸಾಲಿನಲ್ಲಿ ಜಗತ್ತಿನ ವಿವಿಧ ಭಾಗಗಳಲ್ಲಿ ೧೦ ಕೋಟಿ ಜನರು ಕೊಳೆಗೇರಿಯಲ್ಲಿ ವಾಸಮಾಡುತ್ತಿದ್ದರು. ಇನ್ನು ಹದಿನೈದು ವರ್ಷಗಳಲ್ಲಿ ಆರ್ಥಿಕ ಬೆಳವಣಿಗೆಯಾದಂತೆಲ್ಲ ಕೊಳೆಗೇರಿಯಲ್ಲಿ ವಾಸಮಾಡುವವರ ಸಂಖ್ಯೆಯೂ ಹೆಚ್ಚಾಗಲಿದೆ. ಅಂದರೆ ಆರ್ಥಿಕ ಪ್ರಗತಿಯಿಂದ ತಿರುಗು–ಮುರುಗು ಪರಿಣಾಮ ಉಂಟಾಗುತ್ತಿದೆ ಎನ್ನುವುದು ಸುಸ್ಪಷ್ಟ.

ಈ ವಸ್ತುಸ್ಥಿತಿಯ ಹಿನ್ನಲೆಯಲ್ಲಿ, ಗಾಂಧೀಜಿಯವರ ಪ್ರಕಾರ ಬಡತನ ನಿರ್ಮೂಲನ ಈ ಕೆಳಗೆ ಕಾಣಿಸಿದ ಕ್ರಮಗಳಿಂದ ಮಾತ್ರ ಸಾಧ್ಯ:

**೧. ಗ್ರಾಮ ಸ್ವರಾಜ್ಯಗಳ ಸ್ಥಾಪನೆಯಾಗಬೇಕು.**

**೨. ಸತ್ಯ–ಅಹಿಂಸೆ–ಅಪರಿಗ್ರಹ–ಅಸ್ತೇಯ ಮುಂತಾದ ಜೀವನ ಮೌಲ್ಯಗಳು ದೇಶದ ಆರ್ಥಿಕ ನೀತಿಗಳಾಗಿ ಮಾರ್ಪಡಬೇಕು.**

**೩. ಭಗವಂತನನ್ನೂ ಮತ್ತು ದಾನವನನ್ನೂ ಏಕಕಾಲಕ್ಕೆ ಸೇವೆ ಮಾಡಲಾರೆವು ಎಂಬುದೇ ಅತ್ಯಂತ ಶ್ರೇಷ್ಠ ಮೌಲ್ಯದ ಆರ್ಥಿಕ ಸತ್ಯ ಎಂಬುದನ್ನು ಭಾರತೀಯರಿಗೆ ಮನವರಿಕೆ ಮಾಡಿಕೊಡಬೇಕು.**

★

## ಸಮೃದ್ಧಿ ಮತ್ತು ಅನ್ಯಾಯ

**ಸಮೃದ್ಧಿ ಮತ್ತು ಅನ್ಯಾಯ** – ಇವು ಇಪ್ಪತ್ತನೇ ಶತಮಾನದ ಎರಡು ಮುಖ್ಯ ಲಕ್ಷಣಗಳಾಗಿವೆ. ಕಳೆದ ನಲವತ್ತು ವರ್ಷಗಳಲ್ಲಿ ವಿಶ್ವದ ಒಟ್ಟು ರಾಷ್ಟ್ರೀಯ ಉತ್ಪನ್ನದ ಪ್ರಮಾಣ ಹೆಚ್ಚು ಕಡಿಮೆ ದುಪ್ಪಟ್ಟಾಗಿದೆ. ಅದೇ ಹೊತ್ತಿಗೆ ಆರ್ಥಿಕ ಅಸಮಾನತೆ ಮೂರು ಪಟ್ಟು ಹೆಚ್ಚಿದೆ. ಜಗತ್ತಿನಲ್ಲಿ ಶ್ರೀಮಂತರು ಕೇವಲ ಶೇ. ೨೫ರಷ್ಟಿದ್ದರೂ, ಅವರು ಶೇ. ೮೦ರಷ್ಟು ಅದರ ಸಂಪನ್ಮೂಲವನ್ನು ಬಳಸುತ್ತಿದ್ದಾರೆ. ಶೇ. ೭೫ರಷ್ಟಿರುವ ಬಡಜನತೆ ಉಳಿದ ಶೇ. ೨೦ ರಷ್ಟು ಸಂಪನ್ಮೂಲದಲ್ಲಿ ಬದುಕುತ್ತಿದ್ದಾರೆ. ಪರಿಣಾಮವಾಗಿ ಜಗತ್ತಿನಾದ್ಯಂತ ೨೦೦ ಕೋಟಿಗೂ ಹೆಚ್ಚು ಜನರು ಬಡತನದ ರೇಖೆಯ ಕೆಳಗಿದ್ದಾರೆ. ಅವರ ದಿನಗಳಿಕೆ ೯೦ ರೂಪಾಯಿಗಳಿಗಿಂತಲೂ ಕಡಮೆ. ಈ ದುರಂತದ ಇನ್ನೊಂದು ಮುಖ ಹೇಗಿದೆ ನೋಡಿ. ಶ್ರೀಮಂತ ದೇಶಗಳು ತಮ್ಮ ಗಡಿಗಳನ್ನು ರಕ್ಷಿಸಿಕೊಳ್ಳಲು ಪ್ರತಿ ವರ್ಷ ರೂ.೪೦,೦೦,೦೦೦ ಕೋಟಿ ಖರ್ಚು ಮಾಡಿದರೆ, ಹಿಂದುಳಿದ ದೇಶಗಳಿಗೆ ಕೇವಲ ರೂ. ೨,೭೦,೦೦೦ ಕೋಟಿ ಧನಸಹಾಯ ಮಾಡುತ್ತಿವೆ. ಹಸಿವೆಯೇ ದೊಡ್ಡ ಸಮಸ್ಯೆಯಾಗಿರುವ ಈ ದೇಶಗಳಿಗೆ ಈ ಸಾಲದ ಹಣದಿಂದ ಎಷ್ಟರ ಮಟ್ಟಿಗೆ ಸಹಾಯವಾದೀತು? ಆ ದೇಶಗಳಲ್ಲಿ ಪ್ರತಿ ೧೧ ನಿಮಿಷಕ್ಕೆ ಒಂದು ಮಗು ಮತ್ತು ದಿನಕ್ಕೆ ೨೪,೦೦೦ ಜನರು ಹಸಿವಿಗೆ ಸಂಬಂಧಿಸಿದ ಸಮಸ್ಯೆಗಳಿಂದ ಸಾಯುತ್ತಿದ್ದಾರೆ. ಇದು ಪ್ರತಿ ವಾರವೂ ಒಂದು ಸುನಾಮಿ ಅಪ್ಪಳಿಸುವುದಕ್ಕೆ ಸಮನಾಗಿದೆ. ಯಾವ ಸುನಾಮಿ ತಾನೇ ಇದಕ್ಕಿಂತ ಹೆಚ್ಚು ವಿನಾಶಕಾರಿಯಾದುದು?


ಹಾಗಿದ್ದರೆ ಯಾವುದನ್ನು 'ನಾಗರಿಕತೆ' ಎಂದು ನಾವು ಕರೆಯಬೇಕು? ತನ್ನದೇ ಮಕ್ಕಳು ಕನಿಷ್ಠ ಆವಶ್ಯಕತೆಗಳ ಕಾರಣದಿಂದಾಗಿ ಹುಳುಗಳಂತೆ ಸಾಯುತ್ತಿರುವುದನ್ನು ನೋಡಿಯೂ, ಭೋಗದಲ್ಲಿ ಮುಳುಗುವುದು ನಾಗರಿಕತೆಯೆ? ಒಂದು ವೇಳೆ ನಾವು ಈ ಅಸಮಾನತೆಯನ್ನು ತಡೆಯದಿದ್ದಲ್ಲಿ, ಜಾಗತಿಕ ಅಭಿವೃದ್ಧಿಗಾಗಿ ಪ್ರಯತ್ನಿಸದಿದ್ದಲ್ಲಿ, ಅದು ಈ ಶತಮಾನದ ಅತ್ಯಂತ ದೊಡ್ಡ ಸೋಲು ಅನ್ನಿಸಿಕೊಳ್ಳಲಿದೆ.

ಅರ್ಥಶಾಸ್ತ್ರದ ಭಾಷೆಯಲ್ಲಿ ಹೇಳುವುದಾದರೆ ಮೌಲ್ಯಗಳಿಗೆ ಬೆಲೆಕೊಡದ ಶಕ್ತಿಗಳಿಂದ, ಮಾನವ ಹಕ್ಕುಗಳು ನಿರ್ನಾಮವಾಗುತ್ತವೆ. ಇದಕ್ಕೆ ಆರ್ಥಿಕ ಸುಧಾರಣೆಗಳ ದಶಕ ಅಂದರೆ ೧೯೯೦ರಲ್ಲಿ ಕಂಡುಬಂದ ದುಃಸ್ಥಿತಿಯು ಒಂದು ಉತ್ತಮ ಉದಾಹರಣೆಯಾಗಿದೆ. ತಾಂತ್ರಿಕ ಉನ್ನತಿ ಮತ್ತು ಬಂಡವಾಳದ ಮುಕ್ತ ಹರಿವಿನಿಂದಾಗಿ ಆರ್ಥಿಕ ಪರಿಸ್ಥಿತಿ ಅಭಿವೃದ್ಧಿ ಹೊಂದಿದರೂ, ಒಟ್ಟಾರೆ ಪರಿಸ್ಥಿತಿಯೇ ನೈತಿಕ ಅಧೋಗತಿಗೆ ಕಾರಣವಾಗಿ, ಅಭಿವೃದ್ಧಿಯ ಪರಿಭಾಷೆಯ ಬಗ್ಗೆಯೇ ಚರ್ಚಿಸಬೇಕಾದ ಸಂದರ್ಭ ಆಗ ಒದಗಿಬಂದಿತು. ಈ ಹಿನ್ನೆಲೆಯಲ್ಲಿ ಸಾರ್ವಜನಿಕ ಸಂಪತ್ತನ್ನು ಇಡೀ ಸಮಾಜದ ಅಭಿವೃದ್ಧಿಗಾಗಿ ಬಳಸುವುದನ್ನು ನಾವು ರೂಢಿಸಿಕೊಳ್ಳಬೇಕಾಗಿದೆ. ಪ್ರತಿಯೊಬ್ಬ ವ್ಯಕ್ತಿಗೂ ಅವನ ಬಾಲ್ಯ, ಯೌವನ ಮತ್ತು ಮುಪ್ಪಿನಲ್ಲಿ ದೊರೆಯಬೇಕಾದ ಸೌಲಭ್ಯವನ್ನು ದೊರಕಿಸುವುದೇ ಮಾನವಪ್ರಗತಿಯ ಮಾನದಂಡವಾಗಿದೆ.

ಇವತ್ತು ನಾವು ಅಪಾರ ಮಾನವ ಸಾಧ್ಯತೆಗಳ ಕಾಲದಲ್ಲಿ ಬದುಕುತ್ತಿದ್ದು, ಸಾಮಾಜಿಕ ಅಭಿವೃದ್ಧಿಗೆ ಹೊಸದೊಂದು ದಾರಿಯನ್ನು ಕಂಡುಕೊಳ್ಳಬೇಕಿದೆ. ಮಾನವ ಅಭಿವೃದ್ಧಿಗೆ ಸಂಬಂಧಿಸಿದಂತೆ ಈ ಹಿಂದೆ ಹೇಳುತ್ತಿದ್ದ ಸಬೂಬುಗಳನ್ನು ಇನ್ನು ಮುಂದೆ ಹೇಳಲು ಸಾಧ್ಯವಿಲ್ಲ.

ಮಾನವೀಯತೆಗೆ ಯಾವುದೇ ವಿವರಣೆಕಾರನ ಅಗತ್ಯವಿಲ್ಲ. ಜಗತ್ತಿನ ಎಲ್ಲೆಡೆ ಇರುವ ಮನುಷ್ಯರು ತಾವು ದ್ವೀಪಗಳಲ್ಲ, ಬದಲಾಗಿ ಇತರ ಮನುಷ್ಯರೊಂದಿಗೆ ಸಂಬಂಧ ಹೊಂದಿರುವವರು ಎಂಬ ಅರಿವನ್ನು ಮೂಡಿಸುವ ಪ್ರಯತ್ನ ನಡೆಯಬೇಕಿದೆ. ಇಂಥದೊಂದು ಸಂಪರ್ಕಸೇತುವೆಯ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯಡಿ, ಸಾಮಾಜಿಕ ನ್ಯಾಯ ಹೊಂದುವ ಪ್ರಯತ್ನಗಳು ನಡೆಯಬೇಕಿದೆ. ಆಗ ಮಾತ್ರ ಜಗತ್ತು ಈಗಿರುವುದಕ್ಕಿಂತಲೂ ಹೆಚ್ಚು ಉದಾತ್ತವೂ, ಮಾನವೀಯವೂ ಆಗಬಲ್ಲುದು.

––**ಲೂಯಿ ಲೂಲಾ ಡ'ಸಿಲ್ವಾ**, (ಬ್ರೆಜಿಲ್ ದೇಶದ ಮಾಜಿ ಅಧ್ಯಕ್ಷರು)



# 'ಬಡತನ' ಒಂದು ವಿಶ್ಲೇಷಣೆ

ಜಿ.ಎಸ್. ಜಯದೇವ

ಬಡತನವೆಂಬುದು ಕೇವಲ ಭೌತಿಕ ಪದಾರ್ಥಗಳ ಅಭಾವವಲ್ಲ. ಅದು ಅನೇಕ ಪೀಳಿಗೆಗಳಿಂದ ಹರಿದು ಬಂದ ಮಾನಸಿಕ ಜಾಡ್ಯವಾಗಿಯೂ ಪರಿಣಮಿಸುತ್ತದೆ. ಇದರಿಂದ ವ್ಯಕ್ತಿಯೊಬ್ಬ ತನ್ನ ಘನತೆಯನ್ನು ಮತ್ತು ಸಂವೇದನೆಯನ್ನು ಕಳೆದುಕೊಂಡು ಆಂತರಿಕವಾಗಿಯೂ ಬಡವನಾಗುತ್ತಾನೆ. ಹೀಗಾಗಿ ಬಡತನವು ಅತ್ಯಂತ ದಾರುಣವಾದುದು. ಈ ರೀತಿ ಬಡತನದ ಮನೋವೈಜ್ಞಾನಿಕ ವಿಶ್ಲೇಷಣೆಯನ್ನು ಅತ್ಯಂತ ನಿರ್ಲಿಪ್ತ ಹಾಗೂ ವಾಸ್ತವದೃಷ್ಟಿಯಿಂದ ಮಾಡಿರುವ ಲೇಖಕರು, ಚಾಮರಾಜನಗರದಲ್ಲಿ 'ದೀನಬಂಧು' ಎಂಬ ಮಕ್ಕಳ ಮನೆಯನ್ನು ನಡೆಸುತ್ತಿದ್ದಾರೆ. ಅದಲ್ಲದೆ ಹಲವಾರು ಸೇವಾಯೋಜನೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ನಮ್ಮ ಜನಸಾಮಾನ್ಯರು ತುಂಬ ಒಳ್ಳೆಯವರು... ಅವರು ವಿದ್ಯಾವಂತರಿಗಿಂತ ಹೆಚ್ಚು ಸ್ವಾವಲಂಬಿಗಳು. ಅವರು ಸಾವಿರಾರು ವರ್ಷಗಳಿಂದ ಕಷ್ಟಪಟ್ಟು ಕೆಲಸಮಾಡುತ್ತ, ಗೊಣಗಾಡದೆ ಈ ದೇಶದ ಐಶ್ವರ್ಯವನ್ನು ಸೃಷ್ಟಿಮಾಡುತ್ತಿರುವರು.
– ಸ್ವಾಮಿ ವಿವೇಕಾನಂದ

**ಭಾ**ರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಬಡತನ ಪ್ರಧಾನವಾಗಿ ಎದ್ದು ಕಾಣುವ ಅಂಶ. ಇಡೀ ಭಾರತೀಯ ಬದುಕು ಈ ಬಡತನವನ್ನು ಹೋಗಲಾಡಿಸಲು, ಅಭಿವೃದ್ಧಿ ಸಾಧಿಸಲು ಶ್ರಮಿಸುತ್ತಿದೆ. ಹಸಿದವರಿಗೆ ಅನ್ನ, ಮನೆ ಇಲ್ಲದವರಿಗೆ ಮನೆ, ಎಲ್ಲರಿಗೂ ವಿದ್ಯಾಭ್ಯಾಸ ಮತ್ತು ಆರೋಗ್ಯ ಇವು ನಮ್ಮ ಅಭಿವೃದ್ಧಿ ಮಂತ್ರಗಳು. ಸಂತ ಮಹಾಂತರಿಂದ ಹಿಡಿದು ಇಂದಿನ ಭ್ರಷ್ಟರಾಜಕಾರಣಿಗಳೆಲ್ಲರೂ ಇದೇ ಮಂತ್ರವನ್ನು ಪಠಿಸುತ್ತಿದ್ದಾರೆ. ಆದರೂ ಬಡತನ ನಿವಾರಣೆ ಇಂದಿಗೂ ಕನಸಾಗಿಯೇ ಉಳಿದಿದೆ. ಇಡೀ ಪ್ರಪಂಚದ ಕಥೆಯೂ ಇದೇ ಆಗಿದೆ. ಕಾರ್ಲ್ ಮಾರ್ಕ್ಸ್ ಸಾಮೂಹಿಕ ಒಡೆತನ ಮತ್ತು ಉತ್ಪಾದನೆಗಳನ್ನು ಪ್ರತಿಪಾದಿಸಿದರೆ, ಗಾಂಧೀಜಿ ದುರಾಸೆಗೆ ದೂರವಾದ ಸರಳ ಜೀವನವನ್ನೂ ಮತ್ತು ಎಲ್ಲರ ಶ್ರಮಕ್ಕೂ ಬೆಲೆ ಗೌರವಗಳನ್ನು ದೊರಕಿಸಿಕೊಡುವ ಗುಡಿ ಕೈಗಾರಿಕೆಗಳ ಮೂಲಕ ಉತ್ಪಾದನೆಯನ್ನೂ ಪ್ರತಿಪಾದಿಸಿದರು. ಒಂದು ಹೆಜ್ಜೆ ಮುಂದುವರಿದು ಹೇಳುವುದಾದರೆ ಬಡತನವನ್ನು ಜೀವನಾದರ್ಶವಾಗಿ ಪ್ರತಿಪಾದಿಸಿದರು. ಗಾಂಧೀವಾದದ ಮತ್ತೊಂದು ಮುಖವನ್ನೂ ನಾವು ಗಮನಿಸಬೇಕು. ಯಂತ್ರಗಳಿಂದ ದೂರವಾದ ಮತ್ತು ಅಗತ್ಯವಾದ ವಸ್ತುಗಳ ಉತ್ಪಾದನೆಯನ್ನು ಮಾತ್ರ ಎತ್ತಿ ಹಿಡಿಯುವ ಈ ಆದರ್ಶ ಮನಸ್ಸಿನ ಸಿರಿತನಕ್ಕೆ ಸಂಬಂಧಿಸಿದ್ದು. **ಆಂತರ್ಯದಲ್ಲಿ ಸಿರಿತನ, ಬಾಹ್ಯದಲ್ಲಿ ಬಡತನವೇ ಗಾಂಧೀವಾದದ ತಿರುಳು.**

ಇಂದಿನ ಭಾರತದ ಸರಾಸರಿ ಪರಿಸ್ಥಿತಿ ಒಳಗೂ ಹೊರಗೂ ಎರಡೂ ಕಡೆಯೂ ಇರುವ ಬಡತನಕ್ಕೆ ಸಂಬಂಧಿಸಿದ್ದು. ಒಳಗಿನ ಬಡತನ ಅನಿವಾರ್ಯವಾಗಿ ಹೊರಗಿನ ಬಡತನಕ್ಕೆ ಕಾರಣವಾಗುತ್ತದೆ. ಈ ಒಳಗಿನ ಬಡತನ ಉಂಟಾಗಿರುವುದು ಭೌತಿಕ ಕೊರತೆಗಳಿಂದ. ಈ 'ಕೊರತೆ'ಯು ಬೆಳೆಯುವ ಮನಸ್ಸಿನ ಮೇಲೆ ಬೀರುವ ಪ್ರಭಾವದಿಂದ ಒಳಗಿನ ಬಡತನ ಉಂಟಾಗುತ್ತದೆ. ನಮ್ಮ ದೇಶದ ಶೇ. ೮೦ ರಷ್ಟು ಜನ ತಮ್ಮ ಬೆಳವಣಿಗೆಯ ಮೊದಲ ಹಂತಗಳಲ್ಲಿ ತಮ್ಮ ಸುತ್ತಮುತ್ತ ಲಭ್ಯವಿರುವ ಅನುಸರಣೀಯ ಬಡತನದ ಮಾದರಿಗಳ ಮೂಲಕ, ಈ ಕೊರತೆಯನ್ನು ತಮ್ಮ ವ್ಯಕ್ತಿತ್ವದ ಭಾಗವಾಗಿ ರೂಢಿಸಿಕೊಳ್ಳುತ್ತಾರೆ. ಅದರ ಪರಿಣಾಮವಾಗಿ ಬಡತನದ ಬೇಗೆಯಲ್ಲಿ ಬೇಯುತ್ತಾ ಬಡತನದ ಪಾಕವನ್ನೇ ತೆಗೆಯುತ್ತಾರೆ. ಈ ಪಾಕವನ್ನೇ ಸವಿಯುವ ಮುಂದಿನ ಪೀಳಿಗೆಗಳು ಬಡತನದ ಚೌಕಟ್ಟಿನಿಂದ ಹೊರಗೆ ಬರಲಾರದೆ ಬಡತನದ ವಿಷವೃತ್ತ ಮುಂದುವರೆಯುತ್ತಲೇ ಹೋಗುತ್ತದೆ.

ಒಂದು ವೇಳೆ ಹೊರಗಿನ ಬಡತನ ಮನಸ್ಸಿನ ಪರಿಪೂರ್ಣತೆಯಿಂದ, ಎಂದರೆ ಒಳಗಿನ ಶ್ರೀಮಂತಿಕೆಯಿಂದ ಹುಟ್ಟಿದ್ದಾಗಿದ್ದರೆ ಅದರಿಂದ ಹುಟ್ಟುವ ಬಾಹ್ಯಬಡತನ ಬೇಗೆಯಾಗುತ್ತಿರಲಿಲ್ಲ. ಅದು ತಂಪಾದ ಸುಂದರ ಬದುಕನ್ನು ಕಟ್ಟಿಕೊಡುತ್ತಿತ್ತು. ಆದರೆ ಇಂತಹ ಪರಿಪೂರ್ಣ ಮನಸ್ಸುಗಳು ಭಾರತದಂತಹ ಬಡ ರಾಷ್ಟ್ರದಲ್ಲಿ ಬೆರಳೆಣಿಕೆಯಷ್ಟು ಜನರಲ್ಲೂ ಇಲ್ಲ. ಹಾಗಾಗಿ ನಮ್ಮ ದೇಶದಲ್ಲಿ ಆಂತರ್ಯದ ಸಿರಿತನವನ್ನು ಆದರ್ಶವಾಗಿ ಪ್ರತಿಪಾದಿಸಬಹುದಾದರೂ ಬಾಹ್ಯಬಡತನವನ್ನು ಆದರ್ಶವಾಗಿ ಪ್ರತಿಪಾದಿಸಲು ಸಾಧ್ಯವಿಲ್ಲ. ಈ ಅಂಶವನ್ನು ಮನಗಂಡ ವಿವೇಕಾನಂದರು ಬಡತನ–ಹಸಿವುಗಳ ನಿವಾರಣೆಯ ಬಗ್ಗೆ ಮಾತನಾಡಿದರು.